ಮುತ್ತೈದೆಯಾಗಿರಬೇಕು ಮುದದಿಂದಲಿ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page no. 06.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page no. 201.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 460
4. **Note:** The wordings are mainly as per Ref. 1. The lyrics in Ref.2 are similar to Ref. 1 except few differences which are marked in green highlights. Singer has followed lyrics as in Ref. 2.
5. **Note:** The wordings in Ref. 3 are a mix of both Ref. 1 and Ref. 2. These differences are not considered here.

ರಾಗ: ಕಾಂಬೋಧಿ ತಾಳ: ಅಟ್ಟ

ಮುತ್ತೈದೆಯಾಗಿರಬೇಕು ಮುದದಿಂದಲಿ
ಹತ್ತುನೂರು ನಾಮದೊಡೆಯ ಹರಿ ನಮ್ಮ ಪತಿಯೆಂದು ॥ ಪ ॥

(ಗುರುವಿಂದ) (ಗುರು ಮಧ್ವ) ಶಾಸ್ತ್ರವನು ಓದುವುದೆ ಮಾಂಗಲ್ಯ
(ವೈರಾಗ್ಯವೆಂಬುದೆ) (ವೈರಾಗ್ಯವೆಂಬ) ಒಪ್ಪುವ ಮೂಗುತಿ
(ತಾರತಮ್ಯ ಜ್ಞಾನ ತಾಯಿತ್ತು) (ತಾರತಮ್ಯದರಿಮೆ ತಾಯಿತಿ) ಮುತ್ತು ಸರ
(ಕರುಣ ರಸವೆಂಬಂಥ) (ಕರುಣ ರಸಗಳೆ ಉಳ್ಳ) ಕಟ್ಯಾಣಿ ಕಟ್ಟಿಕೊಂಡು ॥ 1 ॥

ಹರಿಕಥೆಯ ಕೇಳುವುದೆ ಕಿವಿಗೆ ಮುತ್ತಿನ ಓಲೆ
ನಿರುತ ಸತ್ಕರ್ಮವೇ ನಿಜ ಕಾಂತಿಯು
ಪರಮ ಭಕ್ತರ ಪಾದರಜ ಹೆರಳು ಬಂಗಾರ
ಗುರು ಭಕುತಿಯೆಂಬಂಥ ಗಂಧ ಕುಂಕುಮ ಧರಿಸಿ ॥ 2 ॥

ಪೊಡವಿಯೊಳು ಪರ ಹಿತದ ಪಟ್ಟವಾಳಿಯನುಟ್ಟು
ಕೊಡುವ ಧರ್ಮವೆಂಬ (ಕುಬುಸ) (ಕುಪ್ಪುಸವ) ತೊಟ್ಟು
ಬಿಡದೆ ಎನ್ನೊಡೆಯ ಶ್ರೀ ಪುರಂದರ ವಿಠ್ಠಲನ
ಧೃಡ ಭಕುತಿ ಎಂಬಂಥ ಕಡಗ ಬಳೆ ಇಟ್ಟುಕೊಂಡು ॥ 3 ॥

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಈ ಹಾಡಿನಲ್ಲಿ ದಾಸರು ಭಕ್ತಿಯನ್ನು ಸೌಭಾಗ್ಯವೆಂದು ಕಲ್ಪಿಸಿ, ಅಂತಹ ಸೌಭಾಗ್ಯವುಳ್ಳ ಮುತ್ತೈದೆಯನ್ನಾಗಿ ಭಕ್ತನನ್ನು ರೂಪಿಸಿದ್ದಾರೆ.

ವಿ.ಸೂ. :- ಪತಿ - ಪತ್ನಿ ಭಾವದ ಭಕ್ತಿಯನ್ನು ಇಲ್ಲಿ ನೋಡಬಹುದು.

ಹತ್ತುನೂರು ನಾಮದೊಡೆಯ – ಸಹಸ್ರನಾಮಗಳಿಗೆ ವಿಷಯನಾದವನು.

ತಾಯಿತ್ತು – ತಾಯತ.

ಕಟ್ಟಾಣಿ – ಬೆಲೆಬಾಳುವ ಮುತ್ತಿನ ಸರ.

ನಿರುತ ಸತ್ಕರ್ಮ – ಯಾವಾಗಲೂ ಮಾಡುತ್ತಿರುವ ಒಳ್ಳೆಯ ಕೆಲಸಗಳು.

ಪಾದರಜ – ಕಾಲಧೂಳು.

ಹೆರಳು ಭಂಗಾರ – ಜಡೆಬಿಲ್ಲೆ.

ಪೊಡವಿ – ಲೋಕ.

ಪಟ್ಟವಾಳಿ – ಪಟಾವಳಿ, ರೇಷ್ಮೆ ಸೀರೆ.

ಕೊಡುವ ಧರ್ಮ – ದಾನ ಮಾಡುವ ಬುದ್ಧಿ.

Classification: Keerthane
Ankita: sri purandara vittala
Location: NA
Category: jeevanoddhara, bhakti, Mahatmya Gyana
Sub-Category: muttaide, Krishna, pati, Madhava, madhva, madhwacharya, shastra, jnana, taratamya, kivi, karma, bangara, gandha, vairagya, kaadu, dharma,
Pravachana: NA
Explanation: NA